# ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.893/2024**
**CW : 01 PW: 03**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 21.02.2026**

| | |
|---|---|
| ಹೆಸರು | : ಯಲ್ಲ ನಾರಿಲು |
| ತಂದೆಯ ಹೆಸರು | : ಗೂಳಪ್ಪ |
| ವಯಸ್ಸು | : 60 |
| ಉದ್ಯೋಗ | : ಅಬಕಾರಿ ಉಪ ನಿರೀಕ್ಷಕರು |
| ವಾಸಸ್ಥಳ | : ರಾಯಚೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 09/02/2024 ರಿಂದ 11/06/2024 ರವರೆಗೆ ನಾನು ಚಿತ್ತಾಪೂರ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ದಿ: 05/05/2024 ರಂದು ಸಾರ್ವತ್ರಿಕ ಲೋಕ ಸಭೆ ಚುನಾವಣೆ ನಿಮಿತ್ಯೆ ಸಮಯ ಸಂಜೆ 7 ಗಂಟೆ ಸುಮಾರಿಗೆ ಚಿತ್ತಾಪೂರ ವಲಯ ಶಹಾಬಾದ ನಗರದಲ್ಲಿ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ಸಲುವಾಗಿ ಮಾನ್ಯ ಅಬಕಾರಿ ಉಪ ನಿರೀಕ್ಷಕರು ಚಿತ್ತಾಪೂರ ವಲಯ ಇವರ ನೇತೃತ್ವದಲ್ಲಿ ನಾನು ಹಾಗೂ ಇತರೆ ಸಿಬ್ಬಂದಿ ಮತ್ತು ಪಂಚರೊಂದಿಗೆ ಚಿತ್ತಾಪೂರ ವಲಯ ವ್ಯಾಪ್ತಿಯಲ್ಲಿ ಶಹಾಬಾದ ನಗರದ ಮರತೂರು ಗ್ರಾಮದ ಸಿದ್ದಣ್ಣ ತಂದೆ ಜಗನ್ನಾಥ ಎಂಬುವವರ ಮನೆಯಲ್ಲಿ ಅಕ್ರಮವಾಗಿ ಮಾರಾಟಕ್ಕಾಗ ಮದ್ಯೆ ಮತ್ತು ಬಿಯರನ್ನು ಮಾರಾಟ ಮಾಡುವ ಕುರಿತು ಖಚಿತ ಭಾತ್ಮಿ ಬಂದಿರುತ್ತದೆ.

ಸದರಿ ಭಾತ್ಮಿಯು ಬಂದಾಗ ನಾನು ಘಟನಾ ಸ್ಥಳದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೆ. ಮನೆಯ ಮುಂದೆ ಹೋಗುತ್ತಿದ್ದಂತೆಯೇ ದೂರದಿಂದ ಸಮವಸ್ತ್ರದಲ್ಲಿರುವ ನಮ್ಮನ್ನು ನೋಡಿ ಆರೋಪಿತನು ಓಡಿ ಹೋಗಿ ಪರಾರಿಯಾಗಿದ್ದು ಇರುತ್ತದೆ. ನಾವು ಮತ್ತು ಸಿಬ್ಬಂದಿಗಳು ಬೆನ್ನು ಹತ್ತಿ ಹಿಡಿಯಲು ಪ್ರಯತ್ನ ಮಾಡಿದರು ಆತನು ನಮಗೆ ಸಿಗಲಿಲ್ಲ. ಸದರಿ ಆರೋಪಿತನ ಮನೆಯ ಹತ್ತಿರ ಬಂದು ಶೋಧನೆಯನ್ನು ಮಾಡಲು ಸಮಯದ ಅಭಾವ ಇರುವ ಕಾರಣ ಸ್ಥಳದಲ್ಲಿಯೇ ಕಲಂ 54 ಶೋಧನ ಸಮುಚ್ಚಿಯ ವಾರಂಟನ್ನು ಸ್ಥಳದಲ್ಲಿಯೇ ತಯಾರಿಸಿ ಪಂಚರ ಸಮಕ್ಷಮದಲ್ಲಿ ಮನೆಯ ಒಳಗೆ ಹೋಗಿ ಪರಿಶೀಲನೆ ಮಾಡಿದಾಗ, ಒಂದು ಕೈ ಚೀಲ ಹಾಗೂ ಒಂದು ರಟ್ಟಿನ ಪೆಟ್ಟಿಗೆ ಇರುವುದು ಕಂಡು ಬಂದಿತು. ಸದರಿ ಕೈ ಚೀಲವನ್ನು ಬಿಚ್ಚಿ ನೋಡಿದಲ್ಲಿ ಅದರಲ್ಲಿ 1) 90 ಎಮ್.ಎಲ್. ಅಳತೆಯುಳ್ಳ 67 ಒರಿಜಿನಲ್ ಚಾಯ್ಸ ವಿಸ್ಕಿಯ

ಟೆಟ್ರಾ ಪ್ಯಾಕಗಳು ಸುಮಾರು 6.030 ಲೀಟರನಷ್ಟು ದೊರೆತವು, 2) 180 ಎಮ್.ಎಲ್. ಅಳತೆಯುಳ್ಳ 20 ಓಲ್ಡ ಟಾವರಿನ ವಿಸ್ಕಿಯ ಟೆಟ್ರಾ ಪ್ಯಾಕಗಳು ಸುಮಾರು 3.600 ಲೀಟರನಷ್ಟು ದೊರೆತವು, 3) 180 ಎಮ್.ಎಲ್. ಅಳತೆಯುಳ್ಳ 14 ಬ್ಯಾಗ ಪೈಪರ ವಿಸ್ಕಿಯ ಟೆಟ್ರಾ ಪ್ಯಾಕಗಳು ಸುಮಾರು 2.520 ಲೀಟರನಷ್ಟು ದೊರೆತವು, 5) 180 ಎಮ್.ಎಲ್. ಅಳತೆಯುಳ್ಳ 12 ಆಫಿಸರ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕಗಳು ಸುಮಾರು 2.160 ಲೀಟರನಷ್ಟು ದೊರೆತವು, 6) 650 ಎಮ್.ಎಲ್. ಅಳತೆಯುಳ್ಳ 12 ಪವರ ಕೂಲ ಬಿಯರ ಬಾಟಲಿಗಳು, ಸುಮಾರು 7.800 ಲೀಟರನಷ್ಟು ದೊರೆತವು, ಹೀಗೆ ಒಟ್ಟು 14.310 ಲೀಟರ ಮದ್ಯ ಹಾಗೂ 7.800 ಲೀಟರನಷ್ಟು ಬಿಯರಗಳು ದೊರೆತಿದ್ದು ಇರುತ್ತದೆ.

ಜಪ್ತು ಪಡಿಸಿಕೊಂಡಿರುವ ಮುದ್ದೆ ಮಾಲಿನಿಂದ ರಾಸಾಯನಿಕ ಪರೀಕ್ಷೆಗಾಗಿ 90 ಎಮ್.ಎಲ್.ನ ಓ. ಸಿ ವಿಸ್ಕಿಯ 4 ಟೆಟ್ರಾ ಪ್ಯಾಕಗಳು, 180 ಎಮ್.ಎಲ್.ನ ಓಲ್ಡ ಟಾವರಿನ ವಿಸ್ಕಿಯ 4 ಟೆಟ್ರಾ ಪ್ಯಾಕಗಳನ್ನು, 180 ಎಮ್.ಎಲ್.ನ ಬ್ಯಾಗ ಪೈಪರ ವಿಸ್ಕಿಯ 4 ಟೆಟ್ರಾ ಪ್ಯಾಕಗಳನ್ನು, 180 ಎಮ್.ಎಲ್.ನ ಆಫಿಸರ ಚಾಯ್ಸ ವಿಸ್ಕಿಯ 4 ಟೆಟ್ರಾ ಪ್ಯಾಕಗಳು ಹಾಗೂ 650 ಎಮ್.ಎಲ್.ನ 2 ಪವರ ಕೂಲ ಬಿಯರ ಬಾಟಲಿಗಳನ್ನು ತೆಗೆದುಕೊಂಡಿದ್ದು ಇರುತ್ತದೆ ನಂತರದಲ್ಲಿ ಅವುಗಳನ್ನು ಒಂದು ಬಿಳಿ ಚೀಲದ ಪ್ಲಾಸ್ಟಿಕ ಬ್ಯಾನಲ್ಲಿ ಹಾಕಿ ಇಲಾಖೆಗೆ ಸಂಬಂಧಪಟ್ಟ 420 ಅರಕಿನ ಮೊಹರನ್ನು ಹಾಕಿರುತ್ತೇವೆ. ನಾನು ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಸದರಿ ಚೀಲಕ್ಕೆ ಲಗತ್ತಿಸಿದ್ದು ಇರುತ್ತದೆ. ಮಾದರಿ ಸೀಲು ಪತ್ರವನ್ನು ತಯಾರಿಸಿ ಪಂಚನಾಮೆಯನ್ನು ಸಂಜೆ 7 ರಿಂದ 8 ಗಂಟೆವರೆಗೆ ಆರೋಪಿತನ ಮನೆಯ ಕಟ್ಟೆಯ ಮೇಲೆ ಪಂಚರ ಸಮಕ್ಷಮ ಜರುಗಿಸಲಾಯಿತು.

ಮನೆಯ ಮಾಲೀಕ ಮತ್ತು ಓಡಿ ಹೋದ ಆರೋಪಿತನ ವಿರುದ್ಧ ಒಂದು ಪ್ರಕರಣವನ್ನು ದಾಖಲಿಸುವ ಕುರಿತು ಪಂಚರಿಗೆ ತಿಳಿ ಹೇಳಿ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಮುಂದಿನ ತನಿಕೆಗಾಗಿ ಕಡತವನ್ನು ಚಾಸಾ-8 ಇವರಿಗೆ ಹಸ್ತಾಂತರಿಸಿರುತ್ತೇನೆ. ಓಡಿ ಹೋದ ಆರೋಪಿತನನ್ನು ನಾನು ಗುರುತಿಸುತ್ತೇನೆ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ.

ಸಾಕ್ಷಿಯು ಈಗಾಗಲೇ ನಿಶಾನೆಗೊಳಿಸಿರುವ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿದಾರರಿಗೆ ಜಪ್ತು ಪಂಚನಾಮೆಯನ್ನು ತೋರಿಸಲಾಗಿ, ಅದನ್ನು

ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಬಿ) ಎಂದು, ಶೋಧನಾ ಸಮುಚ್ಚಯವನ್ನು ನಿ.ಪಿ.2 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.2 (ಎ) ಎಂದು, ಅರಕಿನ ಗುರುತುಳ್ಳ ಮಾದರಿ ಮುದ್ರೆ ನಮೂನೆಯನ್ನು ನಿ.ಪಿ.3 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.3 (ಎ) ಎಂದು, ಫಿರ್ಯಾದಿಯನ್ನು ನಿ.ಪಿ.4 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು, ಪ್ರ.ವ.ವರದಿಯನ್ನು ನಿ.ಪಿ.5 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.5 (ಎ) ಎಂದು ನಿಶಾನೆಗೊಳಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ಗುನ್ನಾ ಸ್ಥಳದಿಂದ ಗಸ್ತು ಕರ್ತವ್ಯವಿರುವ ಸ್ಥಳವು 200 ಮೀ ಅಂತರದಲ್ಲಿ ಇರುತ್ತದೆ. ಭಾತ್ಮಿ ಬಂದಾಗ ನಾವು ಮರತೂರಿನ ಬಸ್ ನಿಲ್ದಾಣದ ಹತ್ತಿರ ಇದ್ದೆವು. ಬಸ್ ನಿಲ್ದಾಣವು ಜನರಿಂದ ಮತ್ತು ಅಂಗಡಿಯಿಂದ ಕೂಡಿರುವ ಪ್ರದೇಶವಾಗಿರುತ್ತದೆ ಎಂದರೆ ಸರಿ. ಅಲ್ಲಿರುವ ಜನರನ್ನು ನಾನು ಪಂಚರಾಗಿ ಬರಮಾಡಿಕೊಳ್ಳಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿ. ನಾನು ಭಾತ್ಮಿ ಬಂದಾಗ ಮರತೂರದಲ್ಲಿ ಇದ್ದೆ ಎಂದರೆ ಸರಿ.

ಪ್ರಕರಣದ ಪಂಚರು ಚಿತ್ತಾಪೂರ ಊರಿನವರು ಎಂದರೆ ಸರಿ. ಲೋಕಸಭೆಯ ಸಾರ್ವತ್ರಿಕ ಚುನಾವಣೆ ಇದ್ದಾಗ ಪ್ರಕರಣದ ಕುರಿತು ಭಾತ್ಮಿ ಬಂದಿರುವ ಬಗ್ಗೆ ನಾನು ದಾಖಲಾತಿಯನ್ನು ನಿ.ಪಿ.1 ರ ಜೊತೆಗೆ ಲಗತ್ತಿಸಿರುವುದಿಲ್ಲ ಎಂದರೆ ಸರಿ. ಗುನ್ನಾ ಸ್ಥಳವನ್ನು ನಾನು ಪಂಚರ ಸಮೇತ ಸುಮಾರು 10 ಮೀಟರ ಅಂತರದಲ್ಲಿ ನೋಡಿದ್ದು ಇರುತ್ತದೆ. ಸಮವಸ್ತ್ರದಲ್ಲಿರುವ ನಮ್ಮನ್ನು ನೋಡಿ ಯಾವ ದಿಕ್ಕಿಗೆ ಓಡಿ ಹೋದಳು ಎಂದು ದೂರಲ್ಲಾಗಲೀ ಅಥವಾ ಪಂಚನಾಮೆಯಲ್ಲಾಗಲೀ ಬರೆದಿರುವುದಿಲ್ಲ ಎಂದರೆ ಸರಿ.

ಮನೆಯ ವಿವರಣೆಯನ್ನು ದೂರಲ್ಲಾಗಲೀ ಅಥವಾ ಪಂಚನಾಮೆಯಲ್ಲಾಗಲೀ ಬರೆದಿರುವುದಿಲ್ಲ ಎಂದರೆ ಸರಿ. ನಾವು ಶೋಧನಾ ಪತ್ರದಲ್ಲಿ ಮನೆಯನ್ನು ಶೋಧನೆಗೊಳಿಸಿರುವ ಕುರಿತು ಸಮಯ ವಿವರಿಸಿರುವುದಿಲ್ಲ ಎಂದರೆ ಸರಿ. ಆರೋಪಿಗೆ ಸಂಬಂಧಿಸಿದ ಮನೆಯ ಕುರಿತು ನಾವು ಶೋಧನಾ ಸಮುಚ್ಚಿತ ವಾರಂಟಿನಲ್ಲಿ ವಿವರಣೆ ನೀಡಿರುವುದಿಲ್ಲ ಎಂದರೆ ಸರಿ. ಮನೆಯ ಪಕ್ಕದಲ್ಲಿರುವ ಜನರನ್ನು ಪ್ರತ್ಯಕ್ಷ ಸಾಕ್ಷಿಗಳನ್ನಾಗಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಜಪ್ತುಪಡಿಸಿಕೊಂಡಿರುವ ಮುದ್ದೆ ಮಾಲುಗಳು

ಪ್ರಕರಣಕ್ಕೆ ಹಾಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಿಬ್ಬಂದಿ ಹಾಗೂ ಪಂಚರ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ 6 ಗಂಟೆಯ ಮೇಲೆ ಕತ್ತಲು ಕವಿಯುತ್ತದೆ ಎಂದರೆ ಸರಿ. ಆರೋಪಿಯ ಮನೆಯ ಕಟ್ಟೆಯ ಮೇಲೆ ಕುಳಿತುಕೊಂಡು ಪಂಚನಾಮೆಯನ್ನು ಜರುಗಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಪಂಚರು ನಮ್ಮ ಅಬಕಾರಿ ಪ್ರಕರಣಗಳಲ್ಲಿ ಖಾಯಂ ಪಂಚರಾಗಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನಾವು ಸ್ಥಳದ ಚೆಕಬಂದಿಯ ಕುರಿತು ಸಂಪೂರ್ಣ ವಿವರಣೆ ನೀಡಿರುವುದಿಲ್ಲ ಎಂದರೆ ಸರಿ.

ಸ್ಥಳದಲ್ಲಿ ಯಾವುದೇ ಶೋಧನಾ ಸಮುಚ್ಚಿತ ವಾರಂಟನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಮನೆಯಲ್ಲಿ ಒಂದು ಚಾಲನ ಪರವಾನಗಿ ದೊರೆತಿರುತ್ತದೆ ಎಂದರೆ ಸರಿ, ನಾನು ಈ ಚಾಲನ ಪರವಾನಗಿಯನ್ನು ತನಿಕಾ ಸಮಯದಲ್ಲಿ ನೀಡಿರುವುದಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಆಗಲೀ ಅಥವಾ ದೂರಿನಲ್ಲಿ ಆಗಲೀ ಚಾಲನ ಪತ್ರದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಯಾವುದೇ ದೂರನ್ನು ನಿ.ಪಿ.4 ರಂತೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿ.ಪಿ.5 ರಂತೆ ಪ್ರ.ವ.ವರದಿಯನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಮು.ಮಾ.1 ಮತ್ತು 2 ರಂತೆ ಗುಜರಿ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರಂತೆ ಮುದ್ದೆ ಮಾಲುಗಳು ಗುಜರಿ ಅಂಗಡಿಯಲ್ಲಿ ದೊರಕುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.1 ರಲ್ಲಿ ನಮೂದಿಸಿದ ಹಾಗೆ ಯಾವುದೇ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡದೇ ಇದ್ದರೂ ಸಹಿತ ಒಂದು ಖೊಟ್ಟಿ ದಾಖಲೆಯನ್ನು ತಯಾರಿಸಿ ಆರೋಪಿತನ ಯಾವುದೇ ತಪ್ಪನ್ನು ಮಾಡದಿದ್ದರೂ ಆತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಒಂದು ಖೊಟ್ಟಿ ಫಿರ್ಯಾದಿಯನ್ನು ಆರೋಪಿತನ ವಿರುದ್ಧ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ರಿಂದ 5 ರಲ್ಲಿ ಬರೆದಿರುವ ಸಂಗತಿಗಳು ಖೊಟ್ಟಿ ಹಾಗೂ ಬನಾವಟಿಯಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**